ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಶುಶ್ರೂಷಾ (GNM) ಡಿಪ್ಲೊಮ ಕೋರ್ಸಿನ ಪ್ರವೇಶಕ್ಕಾಗಿ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆ ವೇಳಾಪಟ್ಟಿ – ಸೂಚನೆಗಳು

1. ಶುಶ್ರೂಷಾ (GNM) ಡಿಪ್ಲೊಮ ಕೋರ್ಸಿನ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ದಿನಾಂಕ 10-09-2018 ರಂದು ಪ್ರಕಟಿಸಲಾಗಿದೆ.
2. ಎಲ್ಲಾ ಅಭ್ಯರ್ಥಿಗಳು ಅಂದರೆ, ಸಾಮಾನ್ಯ ವರ್ಗ, ಮೀಸಲಾತಿ ಪ್ರವರ್ಗಗಳು ಮತ್ತು ವಿಶೇಷ ಪ್ರವರ್ಗದ ಎಲ್ಲಾ ವಿದ್ಯಾರ್ಥಿಗಳು, ದಾಖಲಾತಿ ಪರಿಶೀಲನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಬೆಂಗಳೂರು ಕೇಂದ್ರದಲ್ಲಿ ಹಾಜರಾಗಬೇಕು.
3. ಅಭ್ಯರ್ಥಿಗಳು, ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ಖುದ್ದಾಗಿ ಹಾಜರಿರಬೇಕು. ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ.
4. ವಿದ್ಯಾರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ, ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು ಮತ್ತು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ಕಡ್ಡಾಯವಾಗಿ ತರಬೇಕು. ಪರಿಶೀಲನೆಯ ದಿನದಂದು ಯಾವುದೇ ದಾಖಲೆ/ ಪ್ರಮಾಣಪತ್ರ / ಅಂಕಪಟ್ಟಿಯನ್ನು ಹಾಜರುಪಡಿಸಲು ಯಾವುದೇ ವಿದ್ಯಾರ್ಥಿ ವಿಫಲನಾದ ಪಕ್ಷದಲ್ಲಿ, ಅಂಥ ವಿದ್ಯಾರ್ಥಿಯ ದಾಖಲೆಗಳನ್ನು ಪರಿಶೀಲನೆ ಮಾಡುವುದಿಲ್ಲ ಮತ್ತು ಅವರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಿಲ್ಲ. ಆನಂತರ ಸೀಟು ಆಯ್ಕೆಗೆ ಸಂಬಂಧಿಸಿದಂತೆ ಅವರನ್ನು ಪರಿಗಣಿಸುವುದಿಲ್ಲ.

| ದಿನಾಂಕ / ಸಮಯ | ವಿಶೇಷ ಪ್ರವರ್ಗ | ಪರಿಶೀಲನೆಯ ವಿವರ |
|---|---|---|
| 18-09-2018 ಬೆಳಿಗ್ಗೆ 11.00 | ವಿಕಲಚೇತನರು | ವೈದ್ಯಕೀಯ ತಪಾಸಣೆ |
| | ಮಾಜಿ ಸೈನಿಕರು | ಸಂಬಂಧಪಟ್ಟ ಜಿಲ್ಲೆಯ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು ನೀಡಿರುವ ಮತ್ತು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು, ಇವರು ಮೇಲುರುಜು ಮಾಡಿರುವ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು. |
| | ಆಂಗ್ಲೋ ಇಂಡಿಯನ್ | ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಸೇರಿರುವ ವಿದ್ಯಾರ್ಥಿಗಳು, ಕರ್ನಾಟಕ ರಾಜ್ಯದಲ್ಲಿನ ಆಂಗ್ಲೋ-ಇಂಡಿಯನ್ ಸಮುದಾಯದ ನೋಂದಾಯಿತ ಒಕ್ಕೂಟ ನೀಡಿರುವ ಮತ್ತು ಸರ್ಕಾರದಿಂದ ನಾಮನಿರ್ದೇಶಿತರಾಗಿರುವ ಆಂಗ್ಲೋ-ಇಂಡಿಯನ್ ವಿಧಾನಸಭಾ ಸದಸ್ಯರ ಮೇಲುರುಜು ಮಾಡಿರುವ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು. |
| | ಸೇವಾನಿರತ ನೌಕರರು | ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಪಡೆದ ಸೇವಾ ನಿರತ ಪ್ರಮಾಣ ಪತ್ರ ಹಾಜರು ಪಡಿಸಬೇಕು. (ಸರ್ಕಾರದ ನಿರ್ದೇಶನದಂತೆ) |

ಪರಿಶೀಲನಾ ವೇಳಾಪಟ್ಟಿ

| ದಿನಾಂಕ | **ಬೆಳಗಿನ ಅವಧಿ -1 ಬೆ.9.00 ರಿಂದ 11.00 ಹಾಜರಾಗುವ ಸಮಯ: ಬೆ. 8.45 ಕ್ರಮ ಸಂಖ್ಯೆಗಳು** | | **ಬೆಳಗಿನ ಅವಧಿ -2 ಬೆ.11.15 ರಿಂದ ಮ.1.15 ಹಾಜರಾಗುವ ಸಮಯ: ಬೆ. 10.45 ಕ್ರಮ ಸಂಖ್ಯೆಗಳು** | | **ಮಧ್ಯಾಹ್ನದ ಅವಧಿ -1 ಮ.2.00 ರಿಂದ ಮ.4.00 ಹಾಜರಾಗುವ ಸಮಯ: ಮ. 1.30** ಕ್ರಮ ಸಂಖ್ಯೆಗಳು | | **ಮಧ್ಯಾಹ್ನದ ಅವಧಿ -1 ಸಂ.4.15 ರಿಂದ 6.15 ಹಾಜರಾಗುವ ಸಮಯ: ಮ. 3.30** ಕ್ರಮ ಸಂಖ್ಯೆಗಳು | |
|---|---|---|---|---|---|---|---|---|
| | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ |
| 18-09-2018 | 1 | 600 | 601 | 1200 | 1201 | 1700 | 1701 | ಕೊನೆಯ ಕ್ರಮ ಸಂಖ್ಯೆವರೆಗೆ |

5. ಅಭ್ಯರ್ಥಿಗಳು ಸಲ್ಲಿಸಬೇಕಾದ ಮೂಲ ದಾಖಲಾತಿಗಳ ವಿವರಗಳನ್ನು, ಸೀಟು ಹಂಚಿಕೆ ವಿಧಾನವನ್ನು ಹಾಗು ಅಭ್ಯರ್ಥಿಗಳು ಅನುಸರಿಸಬೇಕಾದ ಮಾರ್ಗದರ್ಶಿಗಳನ್ನು ಸದ್ಯದಲ್ಲಿಯೇ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಚುರಪಡಿಸಲಾಗುವುದು
6. ಈ ಮೇಲಿನ ವೇಳಾಪಟ್ಟಿಯ ಬಗ್ಗೆ ಮಾಹಿತಿಯನ್ನು ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಕಳುಹಿಸಲಾಗುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರ ಪರವಾಗಿ

ದಿನಾಂಕ: 12-09-2018

ಸ್ಥಳ: ಬೆಂಗಳೂರು